**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 1287/2025**

**ಸಿಡಬ್ಲ್ಯೂ-2 ಪಿಡಬ್ಲ್ಯೂ- 2**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಪತಿ |
| ತಂದೆಯ ಹೆಸರು | : | ರಾಮಚಂದ್ರ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಡ್ರೈವರ್ |
| ವಾಸಸ್ಥಳ | : | ಬೆಂಗಳೂರು |

**ಸಾಕ್ಷಿಗೆ ದಿನಾಂಕಃ 21.05.2026 ರಂದು ಪ್ರಮಾಣ ಮಾಡಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಚಾಸಾ.1 ರವರು ವಾಹನದ ಮಾಲೀಕರಾಗಿರುತ್ತಾರೆ. ನಾನು ಅವರ ಚಾಲಕನಾಗಿರುತ್ತೇನೆ. ದಿ.26.06.2024 ರಂದು ಆರೋಪಿಗಳಿಗೂ ಮತ್ತು ಚಾಸಾ.1ರವರಿಗೂ ಜಮೀನಿನಲ್ಲಿ ಕಾಂಪೌಂಡನ್ನು ನಿರ್ಮಿಸುವ ವಿಚಾರಕ್ಕೆ ಸಂಜೆ 6.30ರ ಸಮಯದಲ್ಲಿ ಜಗಳವಾಗಿದ್ದು, ನಾನು ಆ ಸಮಯದಲ್ಲಿ 300 ಮೀಟರ್ ದೂರದಲ್ಲಿ ಇದ್ದೆನು. ಚಾಸಾ.1ರವರಿಗೆ ಆರೋಪಿಗಳಿಗೆ ಹೊಡೆದಿರುವ ವಿಚಾರ ತಿಳಿದು ಬಂದಿದ್ದು, ನಂತರ ನಾನು ತಲಕಾಡು ಸರ್ಕಾರಿ ಆಸ್ಪತ್ರೆಗೆ ಅವರನ್ನು ಕರೆದುಕೊಂಡು ಹೋಗಿರುತ್ತೇನೆ. ಈ ಸಂಬಂಧ ನಾನು ಹೇಳಿಕಯನ್ನು ನೀಡಿರುತ್ತೇನೆ. 1 ಮತ್ತು 2 ನೇ ಆರೋಪಿಗಳು ಹಾಜರಿದ್ದು, ಅವರನ್ನು ನೋಡಿ ಗುರುತಿಸಿರುತ್ತಾರೆ. 3 ನೇ ಆರೋಪಿಯು ಗೈರು ಹಾಜರಿದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ. ಜಮೀನಿನ ಸರ್ವೆ ನಂ.106/9 ಆಗಿರುತ್ತದೆ.

**(ಮಾನ್ಯ ಎಪಿಪಿ ರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಭಾಗಶ: ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ</u>**

ಚಾಸಾ.1ರವರು ತಮ್ಮ ಜಮೀನಿನಲ್ಲಿ ಕಾಂಪೌಂಡನ್ನು ನಿರ್ಮಿಸುತ್ತಿದ್ದಾಗ ಆರೋಪಿಗಳು ಅತಿಕ್ರಮ ಪ್ರವೇಶ ಮಾಡಿ ಕಾಂಪೌಂಡ್ ನಿರ್ಮಿಸಿರುವುದನ್ನು ತಡೆದಿದ್ದು, ಅದನ್ನು ಚಾಸಾ.1ರವರು ಕೇಳಿದಾಗ

2 ಮತ್ತು 3 ನೇ ಆರೋಪಿಗಳು ಅವರನ್ನು ಹಿಡಿದು ಎಳೆದಾಡಿ ಕೈಯಿಂದ ಅವರಿಗೆ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ.1 ರವರಿಗೆ ನೋವಾಗಿವುದು ನಿಜ ಇರುತ್ತದೆ ಆದರೆ ಎಳೆದಾಡಿರುವುದನ್ನು ನಾನು ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಗಳೆಲ್ಲರೂ ಚಾಸಾ.1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾನು ಹಾಜರಿರಲಿಲ್ಲ ಎಂದು ನುಡಿದಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ. ಎ.ಪಿ.ಎಸ್. ವಕೀಲರಿಂದ:</u>**

ನಾನು ಗಲಾಟೆಯನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಗಂಡ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು 300 ಮೀಟರ್ ದೂರದಲ್ಲಿ ಇದ್ದ ಕಾರಣ ಚಾಸಾ.1 ರವರಿಗೆ ಯಾರು ಹೊಡೆದರು ಎಂದು ನೋಡಿರುವುದಿಲ್ಲ. ಚಾಸಾ.1 ರವರು ನನಗೆ ಮಾಲಿಕರಾಗಿದ್ದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ 4 ರಿಂದ 5 ಜನ ಕೆಲಸಗಾರರು ಇದ್ದರು. ಘಟನಾ ಸ್ಥಳದಲ್ಲಿ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಚಾಸಾ.1 ರವರಿಗೂ ಸಿವಿಲ್ ದಾವೆ ಇದ್ದು ಅದಕ್ಕೆ ಅನುಕೂಲವಾಗಲಿ ಎಂದು ಚಾಸಾ.1 ರವರ ಮಾತನ್ನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**